O.S.No 460/2017 P W - 1

ದಿನಾಂಕ 21.09.2023 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.

<u>ಮುಂದುವರೆದ ಪಾಟೀ ಸವಾಲು ಃ ಪ್ರತಿವಾದಿಗಳ ಪರ ಶ್ರೀ.ಎಸ್.ಪಿ.ಕೆ. ವಕೀಲರಿಂದ ಃ</u>

"ಬಿ" ಅನುಸೂಚಿ ಸ್ವತ್ತನ್ನು ನಿಪಿ-1 ಮತ್ತು 12 ರಲ್ಲಿ ನಮೂದು ಮಾಡಿರುವುದಿಲ್ಲ. "ಬಿ" ಅನುಸೂಚಿ ಸ್ವತ್ತು ಪ್ರತಿವಾದಿಗಳ ಸ್ವತ್ತಿನಲ್ಲಿ ಬರುತ್ತದೆ ಎಂದರೆ ಸರಿಯಲ್ಲ. ನಮಗೆ ಕ್ರಯವಾಗುವ ಮುನ್ನವೇ ಪ್ರತಿವಾದಿಗಳು ಮನೆಯನ್ನು ಕಟ್ಟಿಕೊಂಡಿದ್ದರು ಎಂದರೆ ಸರಿ. ಪ್ರತಿವಾದಿಯ ತಂದೆ ಕ್ರಯಕ್ಕೆ ಪಡೆದ ಆಸ್ತಿಯಲ್ಲಿ ಪ್ರತಿವಾದಿಗಳು ಮನೆಯನ್ನು ಕಟ್ಟಿಕೊಂಡಿರಬಹುದು. ಪ್ರತಿವಾದಿಗಳು ಕೊಂಡುಕೊಂಡ ಜಮೀನಿನಲ್ಲಿ ಪೂರ್ತಿ ಮನೆಯನ್ನು ಕಟ್ಟಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ಕೊಂಡು ಕೊಂಡ ಜಮೀನಿನಲ್ಲಿ ನಮಗಾಗಲೀ ನಮಗೆ ಮಾರಿದಂತಹ ವ್ಯಕ್ತಿ ಗಳಿಗೆ ಯಾವುದೇ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ.

ನಮಗೆ ಉತ್ತರದ ಕಡೆಗೆ ಜಾಗ ಇದ್ದರೂ ಸಹ ದಾವಾ ಸ್ವತ್ತನ್ನು ಹೊಡೆಯುವ ಉದ್ದೇಶದಿಂದ ಪೂರ್ವದ ಕಡೆಗೆ ದಾರಿ ಇದೆಎ ಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. "ಬಿ" ಅನುಸೂಚಿ ಸ್ವತ್ತಿಗೆ ಸಂಬಂಧಪಟ್ಟಂತೆ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. "ಬಿ" ಅನುಸೂಚಿ ಸ್ವತ್ತ ನ ಮೇಲೆ ಯಾವುದೇ ಹಕ್ಕು ಇಲ್ಲದೇ ಇದ್ದರೂ ಸಹ ಸುಳ್ಳು ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-8 ಮತ್ತು 9 ರಲ್ಲಿ ಪ್ರತಿವಾದಿಗಳೇ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. "ಬಿ" ಅನುಸೂಚಿ ಸ್ವತ್ತಿನಲ್ಲಿ ಪ್ರತಿವಾದಿಗಳೇ ಸ್ವಾಜಧೀನದಲ್ಲಿ

ಇರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ಸಂಬಂಧಿಸಿದ ಸ್ವತ್ತಿನಲ್ಲಿ ಯಾವುದೇ ಹಕ್ಕು ಇಲ್ಲದೇ ಇದ್ದರೂ ಸಹ ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)

ಓ ಹೇ ಕೇ ಸ ಒ

ಎರಡನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಕನಕಪುರ